# QCA : 284

## ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ

## 2018

**Time : 1½ hours** | **Maximum Marks : 150**
ಸಮಯ: 1½ ಗಂಟೆಗಳು | ಗರಿಷ್ಠ ಅಂಕಗಳು: 150

### QUESTION PAPER SPECIFIC INSTRUCTIONS

### ಪ್ರಶ್ನೆ ಪತ್ರಿಕೆಯ ನಿರ್ದಿಷ್ಟ ಸೂಚನೆಗಳು

(ಪ್ರಶ್ನೆಗಳಿಗೆ ಉತ್ತರಿಸುವ ಮುನ್ನ ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ದಯವಿಟ್ಟು ಎಚ್ಚರಿಕೆಯಿಂದ ಓದಿ.)

1. ಈ ಪತ್ರಿಕೆಯಲ್ಲಿ 12 ಪ್ರಶ್ನೆಗಳಿದ್ದು, ಇವುಗಳನ್ನು ಎರಡು ವಿಭಾಗಗಳಲ್ಲಿ (ವಿಭಾಗ-**A** ಮತ್ತು ವಿಭಾಗ-**B**) ನೀಡಲಾಗಿದೆ.

2. ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕು.

3. ಪ್ರತಿ ಪ್ರಶ್ನೆಯು ಒಳಗೊಂಡಿರುವ ಅಂಕಗಳನ್ನು ಪ್ರಶ್ನೆಯ ಎದುರಿಗಿರುವ ಆವರಣದಲ್ಲಿ [ ] ಸೂಚಿಸಲಾಗಿದೆ.

4. ಪ್ರಶ್ನೆಯ ವಿವರ ಮತ್ತು ಅಂಕಗಳ ಹಂಚಿಕೆಗಾಗಿ, ಈ ಪ್ರಶ್ನೆ/ಉತ್ತರ ಪುಸ್ತಿಕೆಯ ಪುಟ ಸಂಖ್ಯೆ 5ರಲ್ಲಿನ ಪ್ರಶ್ನೆಗಳ ಕೋಷ್ಠಕವನ್ನು ಗಮನಿಸತಕ್ಕದ್ದು.

5. ನಿರ್ದಿಷ್ಟವಾಗಿ ಸೂಚಿಸಿದ ಹೊರತು, ಉತ್ತರಗಳನ್ನು ಕನ್ನಡದಲ್ಲಿ ಬರೆಯತಕ್ಕದ್ದು.

6. ವಿಭಾಗ-**A** ನ ಪ್ರಶ್ನೆ ಸಂಖ್ಯೆ 3ಕ್ಕೆ ಉತ್ತರವನ್ನು ಇದಕ್ಕೆಂದೇ ಒದಗಿಸಿರುವ ಸ್ಥಳದಲ್ಲಿ ಬರೆಯತಕ್ಕದ್ದು.

7. ವಿಭಾಗ-**A** ನ ಪ್ರಶ್ನೆ ಸಂಖ್ಯೆ 3ಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ಲೇಖನವು ಸೂಚನೆಗಿಂತ ಬಹಳ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಳೆಯಲಾಗುವುದು.

8. ಪ್ರಶ್ನೆಗಳಿಗೆ ಉತ್ತರಿಸುವಾಗ ನಿಮ್ಮ ಹೆಸರನ್ನು ಬರೆಯುವುದಾಗಲೀ, ಸಹಿಯನ್ನು ಹಾಕುವುದನ್ನಾಗಲೀ ಅಥವಾ ನಿಮ್ಮ ವ್ಯಕ್ತಿತ್ವದ ಗುರುತಿನ ವಿವರವನ್ನು ನಮೂದಿಸುವುದನ್ನಾಗಲೀ ಮಾಡಕೂಡದು.

## SECTION—A / ವಿಭಾಗ—A

1. ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು 300 ಶಬ್ದಗಳಲ್ಲಿ ಪ್ರಬಂಧ ಬರೆಯಿರಿ. [25]

(a) ನಗರಾಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಪರಿಸರ ನಾಶ ಮತ್ತು ಅದರ ಪರಿಣಾಮಗಳು.

(b) ಖಾಸಗಿ ನೆಟ್‌ವರ್ಕ್‌ನವರು ಉಚಿತವಾಗಿ ನೀಡುವ ಅಂತರ್ಜಾಲ ಸಂಪರ್ಕ ಸೇವೆಗಳಿಂದಾಗುವ ಅನುಕೂಲ ಮತ್ತು ಅನಾನುಕೂಲಗಳು.

(c) ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಮಾಂಸಕ್ಕಾಗಿ ಗೋಹತ್ಯೆ ನಿಷೇಧ ಕಾಯ್ದೆಯ ಜಾರಿ ಮತ್ತು ಅದರ ಪರಿಣಾಮಗಳು.

(d) ಮೂಢನಂಬಿಕೆಗಳಿಂದ ಮುಗ್ಧ ಜನರ ಸುಲಿಗೆ ಮತ್ತು ಕಾಯ್ದೆ ಮೂಲಕ ನಿಯಂತ್ರಿಸುವ ಬಗೆ.

ಕೆಳಗೆ ನೀಡಿರುವ ಅಂಕಣದಲ್ಲಿ ಸ್ಪಷ್ಟವಾಗಿ ನೀವು ಆರಿಸಿರುವ ಪ್ರಬಂಧದ ವಿಷಯವನ್ನು ಬರೆಯಿರಿ

| | |
|---|---|
| ಪ್ರಬಂಧದ ವಿಷಯ | |

ನೀವು ಆರಿಸಿರುವ ಪ್ರಬಂಧವನ್ನು ಇಲ್ಲಿಂದ ಬರೆಯಲು ಆರಂಭಿಸಿ :-

2. ಈ ಕೆಳಗಿನ ಗದ್ಯ ಭಾಗವನ್ನು ಗಮನವಿಟ್ಟು ಓದಿಕೊಂಡು ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಕನ್ನಡಾಭಿಮಾನವೆಂದರೆ ಕೇವಲ ಭಾಷಿಕ ನೆಲೆಯಲ್ಲಿ ಇದ್ದರೆ ಸಾಲದು. ಅದು ಕನ್ನಡತನವಾಗಿ ಹೊರ ಹೊಮ್ಮಬೇಕು. ರಾಷ್ಟ್ರೀಯ, ಅಂತರಾಷ್ಟ್ರೀಯ ವಸ್ತು ವಿಶೇಷಗಳನ್ನು ಸ್ವೀಕರಿಸಿದರೂ ಸ್ಥಳೀಯ ಸಾಚಾತನವನ್ನು ಉಳಿಸಿಕೊಳ್ಳುವುದರಲ್ಲಿ ಈ ಕನ್ನಡತನವಿದೆ. ಯಾವುದೇ ಕ್ಷೇತ್ರ ವಸ್ತು ವಿನ್ಯಾಸ ಪ್ರಕಾರಗಳಿರಲಿ, ಸ್ಥಳೀಯ ವಿಚಾರ ವಿವೇಕ ಹಾಗೂ ಔಚಿತ್ಯಗಳನ್ನು ಒಳಗೊಂಡು ಸಂವೇದನೆಯ ಸ್ವರೂಪದಲ್ಲಿ ಕನ್ನಡತನವಿರಬೇಕು.

ಒಂದು ಕಾಲದಲ್ಲಿ ಕನ್ನಡ ಚಲನಚಿತ್ರಗಳನ್ನು ಪ್ರದರ್ಶಿಸಿ, ಕನ್ನಡ ಚಲನಚಿತ್ರಗಳನ್ನು ನೋಡಿ, ಎನ್ನುವುದೇ ಕನ್ನಡಾಭಿಮಾನವಾಗಿತ್ತು. ಎಂಥದೇ ಆಗಲಿ, ಕನ್ನಡ ಪುಸ್ತಕ ಓದಿ ಎನ್ನುವುದು ಕನ್ನಡಾಭಿಮಾನವಾಗಿತ್ತು. ಕನ್ನಡ ನಾಟಕ ನೋಡಿ ಎಂದರೆ ಅದು ಕನ್ನಡಾಭಿಮಾನ ಎನ್ನಿಸುತ್ತಿತ್ತು. ಇಂದು ಕನ್ನಡ ಚಲನಚಿತ್ರ, ನಾಟಕ, ಪುಸ್ತಕಗಳ ಸಂಖ್ಯೆ ಸಾಕಷ್ಟು ಹೆಚ್ಚಿದೆ. ಉತ್ತಮ ಅಭಿರುಚಿಯ ಚಲನಚಿತ್ರ ನಾಟಕ ಪುಸ್ತಕಗಳ ಬೆಳವಣಿಗೆಗೆ ಕಾರಣವಾಗುವುದು ಇಂದಿನ ಕನ್ನಡಾಭಿಮಾನವಾಗಬೇಕು. ಕನ್ನಡ ಚಲನಚಿತ್ರಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಅಶ್ಲೀಲ ಅರ್ಥದ ಮಾತುಗಳುಳ್ಳ ಚಿತ್ರವನ್ನು ನೋಡಿ ಕನ್ನಡಾಭಿಮಾನವನ್ನು ತೋರಬೇಕಾಗಿಲ್ಲ. ವಿಕಾರಗಳನ್ನು ಪ್ರದರ್ಶಿಸಿದ ಕನ್ನಡ ಚಲನಚಿತ್ರಗಳಿಗೆ ಮಾರು ಹೋಗುವುದು ಕನ್ನಡಾಭಿಮಾನವಲ್ಲ. ದ್ವಂದ್ವಾರ್ಥ ಸಂಭಾಷಣೆಯ ನಾಟಕಕ್ಕೆ ಚಪ್ಪಾಳೆ ತಟ್ಟುವುದು, ಅಗ್ಗದ ಪುಸ್ತಕ, ನಾಟಕ ಚಿತ್ರ ಪತ್ರಿಕೆ–ಪೋಸ್ಟರ್‌ಗಳಿಗೆ ಪ್ರೋತ್ಸಾಹ ಕೊಡುವುದು ಕನ್ನಡತನದ ಕೆಲಸವಲ್ಲ. ಇಂದಿನ ಕನ್ನಡಾಭಿಮಾನವು ವಿವೇಕ, ಔಚಿತ್ಯ ವಿಚಾರಗಳನ್ನು ಒಳಗೊಂಡ ಸಾಚಾ ಸಂವೇದನೆಯ ಆಕಾರವಾಗಿ ಪ್ರಕಟವಾಗಬೇಕು. ಕನ್ನಡದ ಹೊರಗಿನ ದಬ್ಬಾಳಿಕೆ ಪ್ರತಿರೋಧ ಒಡ್ಡುವುದಷ್ಟೇ ಅಲ್ಲ. ಕನ್ನಡದ ಒಳಗಿನ ವಿಕೃತಿಗಳಿಗೆ ವಿರೋಧವಾಗುವುದು ಕನ್ನಡಾಭಿಮಾನದ ತಾತ್ವಿಕ ನೆಲೆಯಾಗಬೇಕು. ಆಗ ಕನ್ನಡ ಹಾಗೂ ಕರ್ನಾಟಕದ ಮರ್ಯಾದೆ ಉಳಿಯುತ್ತದೆ.

ಕನ್ನಡಾಭಿಮಾನವೆಂದರೆ ಕೇವಲ 'ಗತವೈಭವ'ದ ಕನವರಿಕೆಯಲ್ಲ. ಕನ್ನಡಾಭಿಮಾನವು ಸದಾ ಸಮಕಾಲೀನವಾಗುತ್ತಾ ಹೋಗುವ ಸಾರ್ಥಕ ಸಂವೇದನೆ.

ಈಗ ನೋಡಿ, ಕನ್ನಡನಾಡು 'ಶ್ರೀಗಂಧದ ನಾಡು' ಎಂದು ವೈಭವೀಕರಿಸಲಾಗುತ್ತದೆ. ಕರ್ನಾಟಕದ ಬಹುಪಾಲು ಜನರು ಶ್ರೀಗಂಧವನ್ನು ನೋಡಲು ಸಾಧ್ಯವೇ ಆಗಿಲ್ಲ. ಹಾಗಿದ್ದರೆ ಶ್ರೀಗಂಧವಿಲ್ಲದೆ ಇರುವ ನಾಡು ಕನ್ನಡನಾಡಲ್ಲವೇ? ಕನ್ನಡನಾಡಿನಲ್ಲಿ ಶ್ರೀಗಂಧವೂ ಇದೆ, ಜಾಲಿಯ ಮರವೂ ಇದೆ; ಕೋಗಿಲೆಯೂ ಇದೆ; ಕಾಗೆಯೂ ಇದೆ; ಹರಿಯುವ ನದಿಗಳಿವೆ, ಬತ್ತಿದ ಕೆರೆಗಳಿವೆ; ವೈಭವೋಪೇತ ಸೌಧಗಳಿವೆ, ಸೋರಗಿದ ಗುಡಿಸಲುಗಳಿವೆ; ತುಂಬಿದ ಕಡಲು ಇದೆ, ಹಸಿದ ಒಡಲು ಇದೆ; ಹಸುರಿನ ಕಾಡು ಇದೆ, ಒಣಗಿದ ಊರು ಇದೆ; ಕಾವೇರಿ ಕೃಷ್ಣೆಯೂ ಇದ್ದಾರೆ, ನೀರಿಲ್ಲದ ಹಳ್ಳಗಳೂ ಇವೆ; ಬಿರುಕು ಬಿಟ್ಟ ಕೆರೆಗಳೂ ಇವೆ, ಕನ್ನಡ–ಕರ್ನಾಟಕವೆಂದರೆ ಇವೆಲ್ಲವೂ ಮುಖ್ಯ. ನಮ್ಮದು ಹೇಗೆ ಶ್ರೀಗಂಧದ ಕರ್ನಾಟಕವೋ ಹಾಗೆಯೇ ಜಾಲಿ ಹೊಂಗೆಗಳ ಕರ್ನಾಟಕ, ಹೇಗೆ ಕೋಗಿಲೆಗಳ ಕರ್ನಾಟಕವೋ ಹಾಗೆಯೇ ಕಾಗೆಗಳ ಕರ್ನಾಟಕ. ತುಂಬಿದ ಕಡಲ ಕರ್ನಾಟಕದಂತೆಯೇ ಹಸಿದ ಒಡಲುಗಳ ಕರ್ನಾಟಕ. ನಮ್ಮದು ಕಾವೇರಿ ಕೃಷ್ಣೆಯರ ಕರ್ನಾಟಕವೂ ಹೌದು. ಕೆರೆಗಳ ಕರ್ನಾಟಕವೂ ಹೌದು. ಇವೆಲ್ಲವನ್ನೂ ಬಿಟ್ಟು ಹುಸಿ ವೈಭವೀಕರಣದಲ್ಲಿ

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

ಗತವೈಭವದ ಗಾಣದಲ್ಲಿ, ಜಡವಾಗುವ ಮನೋಧರ್ಮವನ್ನು ರೂಪಿಸುವುದು ಕನ್ನಡಾಭಿಮಾನವಲ್ಲ. ಭೇದ-ಭಾವಗಳಿಲ್ಲದ ಕರ್ನಾಟಕವನ್ನು ಕಾಣುವುದು ಕನ್ನಡಾಭಿಮಾನದ ಒಳನೋಟವಾಗಬೇಕು.

ಇಂದು ನಮ್ಮ ನಾಡಿನಲ್ಲಿ ಕನ್ನಡವನ್ನು ಉಳಿಸಿಕೊಂಡಿರುವ ಗ್ರಾಮೀಣ ಜನರು ಹಾಗೂ ಹಳ್ಳಿ-ನಗರಗಳ ಬಡವರು ಕನ್ನಡವನ್ನು ಉಸಿರಾಗಿಸಿಕೊಂಡಿರುವ ಬಡವರ ಉನ್ನತಿಯಲ್ಲಿ ಕನ್ನಡಾಭಿಮಾನದ ವಿಚಾರಗಳು ವಿಕಾಸವಾಗಬೇಕು. ಕರ್ನಾಟಕದ ಬಲ್ಲಿದರ ನೆಲೆಯಿಂದ ಬೆಳೆಯುವ ಕನ್ನಡಾಭಿಮಾನವು ರಾಜಮಹಾರಾಜರ ವೈಭವ, ಯುದ್ಧೋನ್ಮಾದ, ಹುಸಿವೀರತನಗಳನ್ನೂ ಒಳಗೊಂಡು, ನಾಡನ್ನು ಕಟ್ಟಿದ ಬೆವರನ್ನು ನಿರ್ಲಕ್ಷಿಸುವಂತಾಗಬಾರದು. ಕೋಟೆ ಕೊತ್ತಲಗಳನ್ನು, ಗುಡಿ ಗೋಪುರಗಳನ್ನು ಬೆವರು ಬಸಿದು ಕಟ್ಟಿದ ಬಡ ಕನ್ನಡಿಗರನ್ನು ಮರೆತು ಕೇವಲ ಕಟ್ಟಿಸಿದ ರಾಜಮಹಾರಾಜರುಗಳನ್ನು ಮೆರೆಸುವುದು ಕನ್ನಡ ಸಂಸ್ಕೃತಿಯಾಗಬಾರದು. ಇದೇ ಕರ್ನಾಟಕದ ಚರಿತ್ರೆಯಾಗಬಾರದು, ಕಟ್ಟಿದವರನ್ನು ಒಟ್ಟಿಗೇ ಗ್ರಹಿಸುತ್ತಾ ಕಟ್ಟಿಕೊಡುವುದು ನಿಜವಾದ ಚರಿತ್ರೆ. ಕನ್ನಡಾಭಿಮಾನವು ಇಂತಹ ಚರಿತ್ರೆಯನ್ನು ತನ್ನದಾಗಿಸಿಕೊಂಡು ಬೆಳೆಯಬೇಕೇ ಹೊರತು ಜನರನ್ನು ಮರೆತು ರಾಜರ ಮೆರೆಸುತ್ತಾ ಹೋಗಬಾರದು. ಉತ್ತಮ ರಾಜರು ಮತ್ತು ಜನರು ಈ ನಾಡಿನ ಇತಿಹಾಸವನ್ನು ನಿರ್ಮಿಸಿದ ನಿಜದ ನೆಲೆಗಳೆಂಬ ಅರಿವು ಅಗತ್ಯ.

ಭಾರತ ಹೇಗೆ ಏಕಮುಖೀ ಸಂಸ್ಕೃತಿಯನ್ನು ಪಡೆದಿಲ್ಲವೋ ಹಾಗೆಯೇ ಕರ್ನಾಟಕವೂ ಏಕಮುಖೀ ಸಂಸ್ಕೃತಿಯನ್ನು ಪಡೆದಿಲ್ಲ. ನಮ್ಮ ದೇಶ ಬಹುಸಂಸ್ಕೃತಿಗಳ ದೇಶ. ಅಂತೆಯೇ ಪ್ರತಿ ರಾಜ್ಯದಲ್ಲೂ ಬಹುಸಂಸ್ಕೃತಿಗಳಿವೆ. ಕರ್ನಾಟಕವೂ ಇದಕ್ಕೆ ಹೊರತಲ್ಲ. ನಮ್ಮಲ್ಲಿ ಒಂದೇ ಮತವಿಲ್ಲ. ಒಂದೇ ಧರ್ಮವಿಲ್ಲ. ಒಂದೇ ಜೀವನ ವಿಧಾನವಿಲ್ಲ. ಒಂದೇ ಮಾದರಿ ಚರಿತ್ರೆ ಪುರಾಣಗಳಿಲ್ಲ. ನಗರದ ಜನರಿದ್ದಾರೆ. ಗ್ರಾಮೀಣ ಜನರಿದ್ದಾರೆ. ಗ್ರಾಮ-ನಗರಗಳನ್ನು ನೋಡದ ಬುಡಕಟ್ಟುಗಳ ಜನರೂ ಇದ್ದಾರೆ. ಅಲೆಮಾರಿ ಬಂಧುಗಳೂ ಇದ್ದಾರೆ. ಇವರೆಲ್ಲರನ್ನೂ ಒಳಗೊಂಡದ್ದು ಕರ್ನಾಟಕ. ಕನ್ನಡವನ್ನು ಇಡೀ ಕರ್ನಾಟಕದ ಆಡಳಿತಾತ್ಮಕ ಏಕಸೂತ್ರವಾಗಿ ಸ್ವೀಕರಿಸುತ್ತಲೇ ಸಾಂಸ್ಕೃತಿಕ ವೈವಿಧ್ಯತೆಯನ್ನು ಗೌರವಿಸುವುದು ನಮ್ಮ ಕನ್ನಡಾಭಿಮಾನದ ವಿವೇಕವಾಗಬೇಕು. ಕನ್ನಡದ ಕೆಲಸವೆಂದರೆ ಏಕಮುಖಿ ಕೆಲಸವಲ್ಲ. ಅದು ಬಹುಮುಖಿ ಕೆಲಸ. ಅದೊಂದು ಚಲನಶೀಲ, ಚಿಂತನಶೀಲ ಪ್ರಕ್ರಿಯೆ. ಕನ್ನಡಾಭಿಮಾನವು ಸದಾ ಚಲನಶೀಲವಾಗಿರಬೇಕು, ಚಿಂತನಶೀಲವಾಗಿರಬೇಕು. ಬಹುಮುಖಿಯಾದ ಕನ್ನಡದ ಕೆಲಸಗಳಲ್ಲಿ ಆದ್ಯತೆಗಳನ್ನು ಗುರುತಿಸಿಕೊಳ್ಳಬೇಕು. ದೂರಗಾಮಿ ಪರಿಣಾಮ ಹಾಗೂ ಗಟ್ಟಿ ಫಲಶೃತಿಯ ಕೆಲಸಗಳನ್ನು ಮೊದಲ ಆದ್ಯತೆಯಾಗಿ ಸ್ವೀಕರಿಸಬೇಕು. ನಮ್ಮಲ್ಲಿ ಕಾಲು ಶತಮಾನದ ಹಿಂದಿನ ಆದ್ಯತೆಗಳೇ ಇಂದಿನ ಆದ್ಯತೆಗಳೂ ಆಗಿರುವುದು ಒಂದು ವಿಪರ್ಯಾಸ. ಹೌದು, ಪಟ್ಟಿ ಮಾಡಿದರೆ ಅದರಲ್ಲಿ ಅಡಕವಾಗಿರುವ ಹತ್ತಾರು ಕೆಲಸಗಳೆಲ್ಲ ಕನ್ನಡ ಕೆಲಸಗಳೇ ಆಗಿರುತ್ತವೆ. ಆದರೆ ಅತಿ ಮುಖ್ಯವಾದುದು ಯಾವುದು ಎಂದು ಗುರುತಿಸುವ ವಿವೇಕವೂ ಬೇಕಲ್ಲವೇ?

ಕನ್ನಡಾಭಿಮಾನವೆಂದರೆ ಪೀಳಿಗೆಯಿಂದ ಪೀಳಿಗೆಗೆ ಕನ್ನಡತನವನ್ನು ಕೊಂಡೊಯ್ಯುವ ಒಂದು ಪರಂಪರೆ.

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : [5×5=25]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(a) ಯಾವ ಯಾವುದರಲ್ಲಿ ಕನ್ನಡತನವಿರಬೇಕೆಂದು ಲೇಖಕರು ಆಶಿಸುತ್ತಾರೆ?

ಉತ್ತರ :

(b) ಸದಾ ಸಮಕಾಲೀನವಾಗುವ ಕನ್ನಡಾಭಿಮಾನವೆಂದರೇನು? ಹೇಗೆ ವಿವರಿಸಿ.

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(c) ಕನ್ನಡನಾಡು ಬರೀ ಶ್ರೀಗಂಧದ ನಾಡೆ? ವೈವಿಧ್ಯಮಯ ಕನ್ನಡಗಳ ಬಗ್ಗೆ ಲೇಖಕರ ವಿವರಣೆ ಏನು?

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(d) "ಕನ್ನಡ ಉಳಿದಿರುವುದು ಗ್ರಾಮೀಣರಲ್ಲಿ ಮತ್ತು ಬಡವರಲ್ಲಿ" ಲೇಖಕರ ಈ ಹೇಳಿಕೆಯನ್ನು ವಿಮರ್ಶಿಸಿ.

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(e) 'ಭಾರತ' ಒಂದು ಬಹುಸಂಸ್ಕೃತಿಗಳ ದೇಶ – ಹೇಗೆ? ವಿವೇಚಿಸಿ.

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

ಸಂಕ್ಷಿಪ್ತ ಲೇಖನ / **(Précis Writing)**

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

3. ಸುಮಾರು 120 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ.

ವಿ.ಸೂ: ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದರೆ ಅಂಕಗಳನ್ನು ಕಳೆಯಲಾಗುವುದು. **[25]**

ನಾನು ಚಿಕ್ಕವನಾಗಿದ್ದಾಗ – ಏಕೆಂದರೆ ಈಗ ನಾಗರಿಕತೆ ಬಂದುದರಿಂದ ಹಿಂದಿನ ಆಚಾರಗಳೆಲ್ಲ ಪರಿವರ್ತನೆಯಾಗಿ ಹೋಗಿವೆ – ನಾನು ಚಿಕ್ಕವನಾಗಿದ್ದಾಗ ನಮ್ಮ ಮನೆಯಲ್ಲಿ "ಅಭ್ಯಂಗ" ಎಂದರೆ ನಮಗೆಲ್ಲ ಜನನ, ಮರಣ, ವಿವಾಹ, ಪೋಲಿಸರ ಕಾಟ, ಜಮಾಬಂದಿ ಎಲ್ಲಾ ಒಟ್ಟಿಗೆ ಬಂದ ಹಾಗೆ ಅನುಭವವಾಗುತ್ತಿತ್ತು. ನಾವಾಗ ವಿದ್ಯಾರ್ಥಿಗಳಷ್ಟೆ? ಐಗಳು ನಮ್ಮ ಮನೆಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ನಮಗೆ ಅವರು ಮೇಷ್ಟ್ರಾದರೂ ನಮ್ಮ ಹಿರಿಯರಿಗೆ ಅವರು ಕೂಲಿಯಾಳು. ಐಗಳು ನಮಗೆ ಅ ಆ ಇ ಈ ಹೇಳಿಕೊಡುವುದರ ಜೊತೆಗೆ ಎಣ್ಣೆ ಹಚ್ಚುವುದು, ಸ್ನಾನ ಮಾಡಿಸುವುದು, ಸಮಯ ಬಿದ್ದರೆ ಬಟ್ಟೆ ಒಗೆಯುವುದು, ಪ್ರಸಂಗ ಬಂದರೆ ಗುಡಿಸುವುದು. ಅವರ ವೃತ್ತಿಯಲ್ಲಿ ಅದೂ ಒಂದು ಭಾಗವಾಗಿದ್ದುದರಿಂದ – ಆಳುಲೆಕ್ಕ ಇಡುವುದು, ಪುಣ್ಯಕಾರ್ಯವಾದುದರಿಂದ ದೇವರ ಪೂಜೆ ಮಾಡುವುದು ಇತ್ಯಾದಿ ಇತ್ಯಾದಿ ಚಿಲ್ಲರೆ ಕೆಲಸಗಳನ್ನು ಸಾಂಗವಾಗಿ ನೆರವೇರಿಸುತ್ತಿದ್ದರು. ನಮಗೆ ಭಾನುವಾರ ರಜಾ ಜೊತೆಗೆ ಅಭ್ಯಂಜನ ಸಜಾ. ಆ ದಿನ ಎಲ್ಲಿಯಾದರೂ ತಿರುಗಾಡಿ ಹಣ್ಣುಗಿಣ್ಣು ಕಿತ್ತು, ಮರಗಿರ ಹತ್ತಿ ಕಲ್ಲುಗಿಲ್ಲು ಹೊಡೆದು, ತಲೆಗಿಲೆ ಒಡೆದು, ಏನಾದರೂ ಒಂದು ಸಾಹಸಗೀಹಸ ಮಾಡಿ ಬೇಜಾರು ಕಳೆದುಕೊಳ್ಳೋಣ ಎಂದರೆ ಹಾಳು ಅಭ್ಯಂಜನ ಬಂದು ನಮಗೆಲ್ಲಾ ಬಹಳ ತೊಂದರೆಯಾಗುತ್ತಿತ್ತು. ಬೆಳಗಿನ ಆರು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೂ ಎಣ್ಣೆ ಸ್ನಾನದ ತೀರ್ಥಯಾತ್ರೆ ! ಅದೇನು ಒಬ್ಬರೇ ! ಇಬ್ಬರೇ ! ಮನೆಯ ಮಂದಿಗೆಲ್ಲ "ಅಭ್ಯಂಗ"!

ಅದರಲ್ಲಿಯೂ ನಮ್ಮ ಅಜ್ಜಯ್ಯನ ಅಭ್ಯಂಗವೇ ಅರ್ಧ ದಿನವನ್ನು ಆಪೋಶನ ಮಾಡುತ್ತಿತ್ತು. ಅವರು ವಯಸ್ಸಾದವರು. ದೇವರಲ್ಲಿ ಬಹಳ ಭಕ್ತಿ. ಕಳ್ಳನ್ನು ಬಹಳ ಮಿತವರಿತು ತೀರ್ಥದಂತೆ ಪಾನ ಮಾಡುತ್ತಿದ್ದರು. ಅನ್ನಕ್ಕಿಂತಲೂ ಅಭ್ಯಂಜನವೇ ಶ್ರೇಷ್ಠ ಎನ್ನುವುದು ಅವರ ಧ್ಯೇಯೋಕ್ತಿಯಾಗಿತ್ತು. ಅಭ್ಯಂಜನ ಮಾಡಿ ಮಾಡಿ ದೇಹ ಸ್ವಲ್ಪ ಸ್ಥೂಲತೆಯ ಕಡೆಗೆ ಒಲಿದಿತ್ತು. ವಾರಕ್ಕೊಂದು ಅಭ್ಯಂಜನ ಮಾಡುತ್ತಿದ್ದರೆ ಅಮೃತತ್ವ ಲಭಿಸುವುದೆಂದು ಅವರು ತಿಳಿದಿದ್ದಂತೆ ತೋರುತ್ತದೆ. ಆದರೆ ಪಾಪ ಕೆಲವು ವರುಷಗಳ ಹಿಂದೆ ಅವರು ತೀರಿಕೊಂಡೇ ಬಿಟ್ಟರು. ಅವರು ಸ್ವರ್ಗಕ್ಕೆ ಹೋದರು ಎಂದು ನಾನು ತಿಳಿದಿದ್ದೇನೆ. ಅಲ್ಲೇನು ಕಡಿಮೆ ! ಎಣ್ಣೆ, ಸೀಗೆಕಾಯಿ, ನೀರು, ಬೆಂಕಿ ಬೇಕಾದಷ್ಟಿದೆ. ಅಪ್ಸರೆಯರೂ ಮಂದೆ ಮಂದೆ ಇದ್ದಾರೆ. ಅಭ್ಯಂಜನ ಮಾಡಿದ್ದೇ ಮಾಡಿದ್ದು! ಅವರೇನು ಸ್ವರ್ಗದಲ್ಲಿ ದಿನಕ್ಕೆ ಇಪ್ಪತ್ತನಾಲ್ಕು ಸಾರಿ ಅಭ್ಯಂಜನ ಮಾಡುತ್ತಾರೋ ಏನೋ? ಮಾಡಲಿ ಪಾಪ, ಮಾಡಲಿ ಬೇಕಾದಷ್ಟು ಮಾಡಲಿ! ಮಾನವನ ಈಶ್ವರ ಪ್ರೇಮಕ್ಕೆ ಅಷ್ಟಾದರೂ ಪ್ರತಿಫಲ ಬೇಡವೇ? ಒಂದಿಷ್ಟು ಅಭ್ಯಂಜನವನ್ನು ಕೊಡಲಾರದ ದೇವರು ಅಮೃತವನ್ನೂ ಕೊಡಬಲ್ಲನೇ?

ನಮ್ಮ ಮನೆಯಲ್ಲಿ ಸ್ನಾನದ ಇಲಾಖೆಯೇ ಪ್ರತ್ಯೇಕವಾಗಿತ್ತು. ಯಾರಿಗೂ ಸಂಬಳ ಕೊಡಬೇಕೆಂದು ಇಲಾಖೆ ನಿರ್ಮಿತವಾಗಿರಲಿಲ್ಲ. ಪರಂಪರೆಯಿಂದ ಬಂದದ್ದು. ಮಾಮೂಲನ್ನು ತಪ್ಪದೇ ಪಡೆಯುತ್ತಿದ್ದ ನಮ್ಮವರು ಬರುವ ಆದಾಯ, ತನ್ನ ಮಾಮೂಲನ್ನು ತಪ್ಪಿನಡೆದರೂ ಅಭ್ಯಂಜನದ ಮಾಮೂಲನ್ನು ಮಾತ್ರ ಬಿಟ್ಟಿರಲಿಲ್ಲ. 'ಬಚ್ಚಲು ಮನೆ'ಯೇ ಬೇರೆ. ಇದೇನು? ಕಣ್ಣು ಕಣ್ಣು ಬಿಡುತ್ತಿದ್ದೀರಿ. ನಾನೂ ಮೊನ್ನೆ ಹೇಳಿದ್ದನ್ನು ಮರೆತಂತಿದೆ! ನೀವು ಹೀಗೆಲ್ಲ ಮರೆತರೆ ನನ್ನ ಹರಟೆ ತುಂಡುಗಡಿದು ಹೋಗುತ್ತದೆ. ನಮ್ಮ ಕಡೆ ಸ್ನಾನದ ಮನೆಗೆ 'ಬಚ್ಚಲು' ಎಂದು

ಕರೆಯುತ್ತಾರೆ. ಬಚ್ಚಲಿನಲ್ಲಿ ಒಂದು ದೊಡ್ಡ ಒಲೆ, ಕಬ್ಬಿಣವನ್ನು ಬೇಕಾದರೂ ಕರಗಿಸಬಹುದು ಅದರಲ್ಲಿ. ಆ ಒಲೆಯ ಬಾಯಿ ಮೂರು ಅಡಿ ಎತ್ತರ, ಮೂರು ಅಡಿ ಅಗಲ ಒಲೆಯ ಮೇಲೆ ಎರಡು ದೊಡ್ಡ ಹಂಡೆಗಳನ್ನು ಹೂಳಿರುತ್ತಾರೆ. ಅವುಗಳನ್ನು ತೂತು ಬೀಳುವವರೆಗೂ ತೆಗೆಯುವಂತಿಲ್ಲ. ಹೊರಗೆ ತೆಗೆಯಬೇಕೆಂದರೆ ಅರ್ಧ ಒಲೆಯನ್ನು ಕೀಳಬೇಕು. ಆ ಹಂಡೆಯ ತುಂಬಾ ನೀರು ಹಾಕಿ ಕಾಯಿಸುತ್ತಾರೆ. ನೋಡಿ ತಕಪಕ ಕುದಿಯುವವರೆಗೆ ! ಅಕ್ಕಿ ಹಾಕಿದರೆ ತಕ್ಷಣ ಅನ್ನ ಆಗಿ ಹೋಗುತ್ತದೆ. ಆ ಒಲೆಯ ಬೆಂಕಿಯೇ ಮೂರು ನಾಲ್ಕು ಹೆಣಗಳನ್ನು ಆರೇಳು ನಿಮಿಷಗಳಲ್ಲಿ ಸುಟ್ಟು ಬೂದಿ ಮಾಡಬಹುದು. ಕಟ್ಟಿಗೆಗೇನು ಬರವೇ ಮಲೆನಾಡಿನಲ್ಲಿ ! ನಾನು ನೀವು ಇಬ್ಬರೂ ಹೊರಟರೆ ಹತ್ತೇ ನಿಮಿಷದ ಒಳಗೆ ಕಡಿಮೆ ಎಂದರೂ ಒಂದು ಗಾಡಿ ಕಟ್ಟಿಗೆ ಒಟ್ಟು ಮಾಡಬಹುದು, ಸಣ್ಣಕಡ್ಡಿಗಳನ್ನಲ್ಲ. ಮೈಸೂರು ಬೀದಿಯ ಸಾಲು ಮರಗಳಲ್ಲಿ ಕತ್ತಿದೋಟಿಯಿಂದ ಕ್ಷಯರೋಗ ಹಿಡಿದ ಗಿಡಗಳ ತುದಿಯ ಕೊಂಬೆಗಳನ್ನೂ ಮುರಿದು ತೆಗೆದುಕೊಂಡು ಹೋಗುತ್ತಾರಲ್ಲಾ ಅಂಥ ಕಡ್ಡಿಗಳನ್ನಲ್ಲ, ದೊಡ್ಡ ದೊಡ್ಡ ಕೊಂಬೆಗಳನ್ನು! ನಮ್ಮ ಬಚ್ಚಲು ಮನೆಯ ಬೆಂಕಿ ಎಂದರೆ ಏನೆಂದು ತಿಳಿದಿದ್ದೀರಾ ಸ್ವಾಮಿ? ಬಡಬಾಗ್ನಿಯ ಮರಿ! ಸಾಕ್ಷಾತ್ ಬಡಬಾಗ್ನಿಯ ಮರಿ!

ಭಾನುವಾರ "ಅಭ್ಯಂಜನ" ಎಂದರೆ ಅರ್ಧಡಬ್ಬ ಹರಳೆಣ್ಣೆ, ಎರಡು ಬುತ್ತಿ ಸೀಗೆಪುಡಿ ಮನೆಲೆಕ್ಕಕ್ಕೆ ಖರ್ಚು, ನಾವು ಏಳೆಂಟು ಜನ ಹುಡುಗರು ನಮ್ಮ ಮನೆಯ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು. ನಮ್ಮ ಪ್ರಿನ್ಸಿಪಾಲರೇ ನಮ್ಮಲ್ಲಿ ಎಣ್ಣೆ ಸವರಿಕೊಳ್ಳುವುದಕ್ಕೂ ಬರದ ಅಂಡರ್ ಗ್ರಾಜುಯೇಟ್‌ಗಳಿಗೆ ಎಣ್ಣೆ ಹಚ್ಚುವುದು. ಉಪಾಧ್ಯಾಯರು ವಿದ್ಯಾರ್ಥಿಗಳು ಎಂದರೆ ಹಾಗಿರಬೇಕು ಏನು ಮೈತ್ರಿ? ಏನು ಸೇವೆ? ಎಷ್ಟು ಕರುಣೆ! ಈಗ ಎಲ್ಲೆಲ್ಲಿಯೂ ವಿದ್ಯಾರ್ಥಿಗಳಿಗೂ ಉಪಾಧ್ಯಾಯರುಗಳಿಗೂ ಸಂಬಂಧ ಹೋಯಿತು ಎಂದು ಕೂಗಿಕೊಳ್ಳುತ್ತಿದ್ದಾರೆ. ನಮ್ಮ ಮನೆಯ ವಿಶ್ವವಿದ್ಯಾನಿಲಯವನ್ನು ಉದಾಹರಣೆಯಾಗಿಟ್ಟುಕೊಂಡರೆ ನಮ್ಮ ಈ ಸನಾತನ ಪುರಾತನ ಪವಿತ್ರ ಪುಣ್ಯಭೂಮಿಯಾದ, ಭಾರತ ವರ್ಷದ ಮಾತಂತಿರಲಿ. ಸಮಗ್ರ ಜಗತ್ತಿಗೇ ಕ್ಷೇಮ ಉಂಟಾಗುವುದರಲ್ಲಿ, ಸ್ವಲ್ಪವೂ ಸಂದೇಹವಿಲ್ಲ! ನಗಬೇಡಿ, ಸ್ವಾಮಿ ನಗಬೇಡಿ! ನನ್ನ ಮಾತಿನ ಅಂತರಾರ್ಥವನ್ನು ಗ್ರಹಿಸಿ ನೋಡಿ ಆಗ – ವಿಷಯ ಗೊತ್ತಾಗುತ್ತದೆ. ಹುಡುಗರ ಜೊತೆಗೆ ದೊಡ್ಡವರುಗಳು ಅಪ್ಪಯ್ಯ, ಚಿಕ್ಕಪ್ಪಯ್ಯ, ಸಣ್ಣಚಿಕ್ಕಯ್ಯ, ದೊಡ್ಡಕಕ್ಕಯ್ಯ, ಅಣ್ಣಯ್ಯ, ಅಜ್ಜಯ್ಯ – ಇತ್ಯಾದಿ! ಎರಡು ಆಳುಗಳಿಗೆ ಎಣ್ಣೆ ತಿಕ್ಕೀ ತಿಕ್ಕೀ ಸಾಕಾಗಿ ಹೋಗಬೇಕು. ಎಷ್ಟೋ ಸಾರಿ ಅವರು ಮರುದಿನವೇ ಜ್ವರ ಬಂದು ಹಾಸಿಗೆ ಹಿಡಿದಿದ್ದಾರೆ! ಇನ್ನೆರಡು ಆಳುಗಳು ನೀರು ಸರಿಮಾಡುವುದು.

ಹಾಗೆಂದರೇನು ಅನ್ನುವಿರೋ? ಹೇಳುತ್ತೇನೆ, ಲಾಲಿಸಬೇಕು. ಎರಡು ಹಂಡೆಗಳಲ್ಲಿ ನೀರು ಕುದಿಯುವುದು ಒತ್ತಟ್ಟಿಗಿರಲಿ, ಅದು ನೀರಿನ ಉಗ್ರಾಣವಾಯ್ತು. ಅಲ್ಲಿಂದ ನೀರನ್ನು ತೆಗೆದು ಬೇರೆ ಕಡಾಯಿಗಳಿಗೆ ಹಾಕಿ, ತಣ್ಣೀರು ಬೆರಸಿ, ಹದಮಾಡುವುದು. ನೀರು ಬೆರೆಸಲು ಒಂದು ದೊಡ್ಡ ಅಗಲವಾದ ಬಾಯಿ ಇರುವ ಕಡಾಯಿ ಅಲ್ಲದೆ ಒಂದು ದೋಣಿ ಸುಮಾರು ಹನ್ನೆರಡು ಹದಿಮೂರು ಅಡಿಗಳಷ್ಟು ಉದ್ದದ್ದು, ಆ ದೋಣಿ ಏಕೆ ಅನ್ನುವಿರೋ? ಎಣ್ಣೆ ಹಚ್ಚಿಕೊಂಡು ಮೈ ಚೆನ್ನಾಗಿ ನೆನೆದು ಅಲ್ಲಿ ಅದರಲ್ಲಿ ಮಲಗಿಕೊಳ್ಳುವುದು ಅಭ್ಯಂಜನದ ಮುಖ್ಯವಾದ ಅಂಗ. ಆ ನೀರು ಬಿಸಿ ಬಿಸಿಯಾಗಿರುವುದು ಅದನ್ನು ಬಿಸಿನೀರು ಎಂದರೆ ತಪ್ಪಾಗಬಹುದು. ಸುಡುನೀರು ಎನ್ನುವುದೇ ಉತ್ತಮ ಮತ್ತು ಸತ್ಯಕ್ಕೆ ಹತ್ತಿರ. ಅಭ್ಯಂಜನದಲ್ಲಿ ಬಿಸಿ ನೀರನ್ನು ಉಪಯೋಗಿಸುವುದೇ ಇಲ್ಲ. ಎಲ್ಲಾ ಸುಡುನೀರೇ! ಎಷ್ಟೋ ಸಾರಿ ಹುಡುಗರನ್ನೂ ಬಲತ್ಕಾರದಿಂದ ಎಳೆದುಕೊಂಡು ಹೋಗಿ ಅದರಲ್ಲಿ ಅದ್ದಿದಾಗ ಅವರು ಕಿಟ್ಟನೆ ಕಿರುಚಿಕೊಂಡು ಕೆಳಗೆ ಹಾರಿ ಕಲ್ಲಿನ ಮೇಲೆ ಬಿದ್ದು ಗಾಯವಾಗಿದೆ ಅಂದರೆ! ಇಷ್ಟೊಂದು ವಿಧವಿಧವಾದ ಪಾತ್ರೆಗಳಿಗೆ ನೀರು ಹಾಕುವುದು ಇಬ್ಬರಾಳುಗಳಿಗೆ ಸಾಕು ಸಾಕಾಗಿ ಹೋಗುತ್ತದೆ.

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

ಶೀರ್ಷಿಕೆ/Title ........................................................................................

**ಸಂಕ್ಷಿಪ್ತ ಲೇಖನಕ್ಕಾಗಿ ಸ್ಥಳ/Space for Précis Writing**

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

**No. of Words Used :**
ಉಪಯೋಗಿಸಿದ ಪದಗಳ ಸಂಖ್ಯೆ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

**No. of Words Used :**
ಉಪಯೋಗಿಸಿದ ಪದಗಳ ಸಂಖ್ಯೆ :

| |
|---|
| |

4. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ. [25]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

Bharat Ratna Avul Pakir Jainulabdeen Abdul Kalam generally known as Dr. A.P.J. Abdul Kalam was the 11th President of India.

By profession he was a scientist and an administrator in India. He worked with Indian Space Research Organisation (ISRO) and Defence Research and Development Organisation (DRDO) as an aerospace engineer before becoming the President of India. His work on the development of Launch Vehicle and ballistic missile technology had earned him the name "Missile Man of India". Dr. A.P.J. Abdul Kalam was the visiting professor at Indian Institute of Management, Indore, Ahmedabad and Shillong.

He was a Professor of Aerospace engineering at the JSS University in Chennai, apart from being an adjunct and visiting faculty at other research institutions in India. In his book "India 2020," he recommended plans to make the nation a fully developed one by the year 2020.

His interactions with the student community and his motivational speeches made him quite popular among the youth. In 2011, he launched a mission called 'What can I give movement' aimed at the youth of India, which focussed on defeating corruption in the country.

## SECTION—B / ವಿಭಾಗ—B

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

**ಪತ್ರ ಲೇಖನ/Letter Writing**

5. ಕೆಳಗಿನವುಗಳಲ್ಲಿ ಒಂದು ವಿಷಯವನ್ನು ಕುರಿತು **100** ಪದಗಳಿಗೆ ಮೀರದಂತೆ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. **[10]**

**(a)** ಅಕಾಲಿಕ ಮಳೆಯಿಂದ ನಿಮ್ಮ ಬಡಾವಣೆಯಲ್ಲಿ ಉಂಟಾಗಿರುವ ಅನಾಹುತಗಳನ್ನು ತಡೆಗಟ್ಟಲು ಕ್ರಮವಹಿಸುವ ಬಗ್ಗೆ.

**(b)** 'ಪರಿಸರ ದಿನಾಚರಣೆ' ಯ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಿಸುವ ಬಗ್ಗೆ ಯುವಜನತೆ ಕಾಳಜಿ ವಹಿಸುವ ಬಗ್ಗೆ.

**(c)** "ಧೂಮಪಾನ ನಿಷೇಧ ಕಾಯ್ದೆ" ಜಾರಿಯಲ್ಲಿದ್ದರೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿರುವವರನ್ನು ನಿಯಂತ್ರಿಸಲು ಕೋರಿ.

**(d)** ನೋಟು ರದ್ಧತಿಯಿಂದ ಸಾರ್ವಜನಿಕರಿಗೆ ಆಗಿರುವ ತೊಂದರೆಯನ್ನು ನಿವಾರಿಸಲು ಕುರಿತು.

ಕೆಳಗೆ ನೀಡಿರುವ ಅಂಕಣದಲ್ಲಿ ಸ್ಪಷ್ಟವಾಗಿ ನೀವು ಆರಿಸಿರುವ ಪತ್ರದ ವಿಷಯವನ್ನು ಬರೆಯಿರಿ

| | |
|---|---|
| ಪತ್ರದ ವಿಷಯ | |

ನೀವು ಆರಿಸಿರುವ ವಿಷಯವನ್ನು ಕುರಿತು ಪತ್ರವನ್ನು ಇಲ್ಲಿಂದ ಬರೆಯಲು ಆರಂಭಿಸಿ :-

6. ಕೆಳಗಿನವುಗಳಲ್ಲಿ ಎರಡರ ಅರ್ಥಸ್ವಾರಸ್ಯವನ್ನು ವಿವರಿಸಿ. [2×5=10]

(a) ಮನೆಗೆದ್ದು ಮಾರುಗೆಲ್ಲು

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ

To be used by the Evaluator only

(b) ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು.

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(c) ದೇಶ ನೋಡು ಕೋಶ ಓದು

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(d) ಪಾಲಿಗೆ ಬಂದದ್ದು ಪಂಚಾಮೃತ

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

7. ಈ ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ಅರ್ಥ ವಿವರಿಸಿ. ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. [2×3=6]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(a) ಕಣ್ಣೀರಲ್ಲಿ ಕೈತೊಳೆ

(b) ಕಾಲಿಗೆ ಬುದ್ಧಿ ಹೇಳು

(c) ಮುಗಿಲು ಮುಟ್ಟು

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(d) ಕೈ ಬಿಸಿ ಮಾಡು

8. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. [1×4=4]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(a) ರನ್ನನ ಎರಡು ಕಾವ್ಯಗಳಾವುವು?
ಉತ್ತರ :

(b) 'ಅಕ್ಕ ಮಹಾದೇವಿ' ಯ ವಚನಗಳ ಅಂಕಿತನಾಮ ಯಾವುದು?
ಉತ್ತರ :

(c) ದ.ರಾ.ಬೇಂದ್ರೆಯವರ ಯಾವ ಕೃತಿಗೆ 'ಜ್ಞಾನಪೀಠ' ಪ್ರಶಸ್ತಿ ಬಂದಿದೆ?
ಉತ್ತರ :

(d) 'ಕವಿ ಚಕ್ರವರ್ತಿ'ಗಳು ಯಾರು?
ಉತ್ತರ :

9. ಈ ಕೆಳಗಿನವುಗಳಲ್ಲಿ ಐದಕ್ಕೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ. [5]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(a) ಅಮೃತ
ಉತ್ತರ :

(b) ಋಷಿ
ಉತ್ತರ :

(c) ಕಾವ್ಯ
ಉತ್ತರ :

(d) ಪರ್ವ
ಉತ್ತರ :

(e) ಜ್ಯೋತ್ಸ್ನ
ಉತ್ತರ :

(f) ಯೋಗಿ
ಉತ್ತರ :

(g) ರಫಟಾ
ಉತ್ತರ :

(h) ದಿಶಾ
ಉತ್ತರ :

(i) ಮಹಾಸತಿ
ಉತ್ತರ :

(j) ಶರ್ಕರಾ
ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

10. ಈ ಕೆಳಗಿನವುಗಳಲ್ಲಿ ಐದನ್ನು ಬಿಡಿಸಿ ಬರೆಯಿರಿ.: [5]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(a) ಸದಾಚಾರ
ಉತ್ತರ :

(b) ವೃಕೋದರ
ಉತ್ತರ :

(c) ತಣ್ಣೀರು
ಉತ್ತರ :

(d) ವಿದ್ಯುಲ್ಲತಾ
ಉತ್ತರ :

(e) ಜಿನಾಲಯ
ಉತ್ತರ :

(f) ಮೆಲ್ವಾತು
ಉತ್ತರ :

(g) ಅಂಗೈ
ಉತ್ತರ :

(h) ಹೊಸಗನ್ನಡ
ಉತ್ತರ :

(i) ತಲೆನೋವು
ಉತ್ತರ :

(j) ಕಡೆಗಣ್ಣು
ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

11. ಈ ಕೆಳಗಿನವುಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ. [5]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(a) ತಿಮಿರಾರಿ
ಉತ್ತರ :

(b) ಕಸವರ
ಉತ್ತರ :

(c) ಭುವನ
ಉತ್ತರ :

(d) ಅನುಜ
ಉತ್ತರ :

(e) ಉರಗ
ಉತ್ತರ :

(f) ಮನಸಿಜ
ಉತ್ತರ :

(g) ಅರ್ಜಿಸು
ಉತ್ತರ :

(h) ತಾವು
ಉತ್ತರ :

(i) ಭೃಂಗ
ಉತ್ತರ :

(j) ನಿಕಾಯ
ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

12. ಈ ಕೆಳಗಿನವುಗಳಲ್ಲಿ ಐದಕ್ಕೆ ವಿರುದ್ಧಾರ್ಥಕ ಪದ ಬರೆಯಿರಿ. [1×5=5]

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only

(a) ದಯೆ
ಉತ್ತರ :

(b) ನಂಬಿಕೆ
ಉತ್ತರ :

(c) ಸ್ವಾರ್ಥ
ಉತ್ತರ :

(d) ಆಗಮನ
ಉತ್ತರ :

(e) ಸ್ವೀಕರಿಸು
ಉತ್ತರ :

(f) ಆಯಾತ

ಉತ್ತರ :

(g) ಸಾಕಾರ

ಉತ್ತರ :

(h) ಪ್ರಾಚೀನ

ಉತ್ತರ :

(i) ಈಖಿಯ್ದಿಯರಿತಿಯಿ

ಉತ್ತರ :

(j) ಸಜ್ಜನ

ಉತ್ತರ :

ಮೌಲ್ಯಮಾಪಕರ ಉಪಯೋಗಕ್ಕೆ ಮಾತ್ರ
To be used by the Evaluator only